## ಗಾಂಧಿನಗರ ಪೋಸ್ಟ್

# ಮದುವೆಗೆ ನಾಲ್ಕು ವರ್ಷ ಬಾಕಿ?



'ನನ್ನ ಪಾತ್ರ ಡಿಫರೆಂಟಾಗಿದೆ. ಬಬ್ಲಿ ಬಬ್ಲಿ ರೋಲ್...'– ಹೀಗೆ, ಎರಡು ಮೂರು ಮಾತುಗಳಿಗೆ ಸರಕು ಖಾಲಿಯಾಗುವ ನಟಿಯರ ನಡುವೆ ತಮ್ಮ ಸ್ಪಷ್ಟ ನಿಲುವು ಹಾಗೂ ಅಭಿನಯ ಚಾತುರ್ಯದಿಂದ ಗಮನಸೆಳೆಯುವ ನಟಿ ಮಲೆಯಾಳಿ ಹುಡುಗಿ ಭಾಮಾ.

'ಮೊದಲಾ ಸಲ' ಚಿತ್ರದ ಮೂಲಕ ಕನ್ನಡಕ್ಕೆ ಬಂದ ಭಾಮಾ, ಈಗ ಕೈತುಂಬಾ ಅವಕಾಶಗಳನ್ನು ಪಡೆದಿರುವ ಚೆಲುವೆ. ಪ್ರಸ್ತುತ, 'ಅಪ್ಪಯ್ಯ', 'ಅಂಬರ', 'ಆಟೋ ರಾಜ', 'ಬರ್ಫಿ' ಚಿತ್ರಗಳಲ್ಲಿ ಭಾಮಾ ನಟಿಸುತ್ತಿದ್ದಾರೆ. ಕನ್ನಡ ಸಿನಿಮಾದಲ್ಲಿ ಅವಕಾಶ ಗಿಟ್ಟಿಸಿಕೊಂಡರಷ್ಟೇ ಸಾಲದು, ಭಾಷೆಯನ್ನು ಕಲಿತಾಗಲಷ್ಟೇ ತನಗೆ ದೊರೆತ ಅವಕಾಶಗಳಿಗೆ ನ್ಯಾಯ ಒದಗಿಸಲು ಸಾಧ್ಯ ಎನ್ನುವ ನಂಬಿಕೆ ಆಕೆಯದು. ಆ ಕಾರಣದಿಂದಲೇ ಈಗ ಕನ್ನಡ ಕಲಿತಿದ್ದಾರೆ. ಕೇರಳದಲ್ಲಿ ಇದ್ದಾಗಲೂ ಕಲಿಕೆ ನಿಂತಿಲ್ಲ. ಯಾವುದಾದರೂ ಪದದ ಬಗ್ಗೆ ಅನುಮಾನ ಬಂದಾಗ, ಬೆಂಗಳೂರಿನಲ್ಲಿನ ಗೆಳೆಯರಿಗೆ ಫೋನ್ ಮಾಡಿ 'ಸರಿ ಪಾಠ' ಹೇಳಿಸಿಕೊಳ್ಳುತ್ತಾರಂತೆ.

ಈಚೆಗೆ ಸುದ್ದಿಗೋಷ್ಠಿಯೊಂದರಲ್ಲಿ ಪತ್ರಕರ್ತರ ಜೊತೆ ಹರಟಿದ ಭಾಮಾ ಮಾತನಾಡಿದ್ದೆಲ್ಲ ಕನ್ನಡದಲ್ಲೇ. ಕನ್ನಡ ಕಲಿಕೆ ಆಕೆಗೆ ಅಷ್ಟೇನೂ ಕಷ್ಟ ಅನ್ನಿಸಲಿಲ್ಲವಂತೆ. ಆದರೆ, ತೆಲುಗು ಕಲಿಯುವ ಆಸೆ ಮಾತ್ರ ಇನ್ನೂ ಕೈಗೂಡಿಲ್ಲ. ಯಾಕೋ ತೆಲುಗು ಗಂಟಲಲ್ಲಿ ಇಳಿಯದ ಕಡುಬೆಂದು ಆಕೆಗೆ ಅನುಭವಕ್ಕೆ ಬಂದಿದೆ.

'ನಟಿಯರ ಆಯುಸ್ಸು ಕೇವಲ ಹತ್ತು ವರ್ಷ ಮಾತ್ರ' ಎನ್ನುವುದು ಭಾಮಾ ಅವರ ಇನ್ನೊಂದು ಅನಿಸಿಕೆ. ಹೀಗೆ ಹತ್ತು ವರ್ಷಗಳ ಚೌಕಟ್ಟು ಗೊತ್ತು ಪಡಿಸಿಕೊಂಡರೂ ಮದುವೆಯ ನಂತರ ಆಯ್ದ ಪಾತ್ರಗಳಲ್ಲಿ ನಟಿಸಲಿಕ್ಕೆ ಅವಕಾಶವಿದ್ದೇ ಇದೆ ಎಂದೂ ಅವರು ವಿಶ್ಲೇಷಿಸುತ್ತಾರೆ. ಅಂದರೆ, ನಟಿಯಾಗಿ ಉಳಿದಿರುವ ಅವರ ಆಯುಸ್ಸು ಎಷ್ಟು? 'ಈಗಾಗಲೇ ನಾನು ಚಿತ್ರರಂಗದಲ್ಲಿ ಆರು ವರ್ಷ ಕಳೆದಿದ್ದೇನೆ' ಎಂದರು ಭಾಮಾ. ಈ ಲೆಕ್ಕಾಚಾರದ ಪ್ರಕಾರ ಅವರ ಮದುವೆಗಿನ್ನೂ ನಾಲ್ಕು ವರ್ಷ ಬಾಕಿ ಇದೆ ಎಂದಾಯಿತು.

# ಹುಟ್ಟು ಸಾವಿನ ನಡುವೆ...

'ಹುಟ್ಟು ಸಾವಿನ ನಡುವೆ ನಮ್ಮ ಆರೋಗ್ಯವನ್ನು ಚೆನ್ನಾಗಿ ಇಟ್ಟುಕೊಳ್ಳಬೇಕು. ಅದಕ್ಕಾಗಿ ಯೋಗ ಮಾಡಬೇಕು, ಡಯಟ್ ಮಾಡಬೇಕು. ಇತರ ದೈಹಿಕ ಕಸರತ್ತುಗಳಲ್ಲಿ ತೊಡಗಿಕೊಳ್ಳಬೇಕು...'

ಆರೋಗ್ಯಸೂತ್ರದ ಮೇಲಿನ ಮಾತುಗಳನ್ನು ಅಂಬರೀಷ್ ಆಡಿದರು ಎಂದರೆ ಯಾರಾದರೂ ನಂಬುವುದು ಕಷ್ಟ. ಮಾನವೀಯತೆ ಜೊತೆಗೆ ಅಶಿಸ್ತು ಮತ್ತು ಒರಟುತನವನ್ನೂ ತಮ್ಮ ವ್ಯಕ್ತಿತ್ವದ ಭಾಗ ಆಗಿಸಿಕೊಂಡಂತೆ ಕಾಣಿಸುವ ಅಂಬರೀಷ್ ಆರೋಗ್ಯದ ಪಾಠಗಳ ಬಗ್ಗೆ ಮಾತನಾಡಿದ್ದು ಅಚ್ಚರಿಯಾದರೂ ನಿಜ. ಸಂದರ್ಭವೇ ಹಾಗಿತ್ತು. ನಿರ್ಮಾಪಕರ ಸಂಘ ತನ್ನ ಸದಸ್ಯರಿಗೆ ಆರೋಗ್ಯ ವಿಮೆ ಕಾರ್ಡುಗಳನ್ನು ವಿತರಿಸಿದ ಕಾರ್ಯಕ್ರಮ ಅದು. ಆ ಸಂದರ್ಭದಲ್ಲಿ ಅಂಬರೀಷ್ ಸಹಜವಾಗಿಯೇ ಆರೋಗ್ಯದ ಬಗ್ಗೆ ಕಾಳಜಿ ವ್ಯಕ್ತಪಡಿಸಿದರು. ಅವರ ಮಾತುಗಳಲ್ಲಿ ವಿರಾಗದ ಛಾಯೆಯಿತ್ತು.

ಈಚಿನ ಸಿನಿಮಾಗಳಲ್ಲಿ ಅಂಬರೀಷ್ ಅವರಿಗೆ ಅಧ್ಯಾತ್ಮ ಸ್ಪರ್ಶದ ಪಾತ್ರಗಳೇ ದೊರೆಯುತ್ತಿರುವುದು ವಿಶೇಷ. 'ಡ್ರಾಮಾ' ಚಿತ್ರದಲ್ಲವರು ಸೂತ್ರಧಾರ. 'ಬೊಂಬೆ ಆಡ್ಸೋನ' ಪಾತ್ರ ಅವರಿಗೆ ಖುಷಿ ಕೊಟ್ಟಿದೆ. ತಮ್ಮ ಪಾತ್ರವನ್ನು ಪ್ರೇಕ್ಷಕರು ಮೆಚ್ಚಿಕೊಂಡಿದ್ದು, ಅದರ ಅಗ್ಗಳಿಕೆಯೆಲ್ಲ 'ಡ್ರಾಮಾ'ದ ಪಾತ್ರಗಳನ್ನು ಆಡಿಸಿದ ಯೋಗರಾಜ ಭಟ್ಟರಿಗೆ ಸಲ್ಲಬೇಕು ಎನ್ನುವುದು ಅವರ ಅನಿಸಿಕೆ.

'ಡ್ರಾಮಾ'ದಿಂದ ಕಲಾವಿದರ ಆರೋಗ್ಯದತ್ತ ಮಾತು ಹೊರಳಿತು. ನಿರ್ಮಾಪಕರ ಸಂಘದ ಮೇಲ್ಪಂಕ್ತಿಯಂತೆ 'ಕಲಾವಿದರ ಸಂಘ'ದಿಂದ ಕಲಾವಿದರಿಗೂ ಆರೋಗ್ಯ ವಿಮೆ ಒದಗಿಸಲು ಪ್ರಯತ್ನಿಸುವುದಾಗಿ ಅಂಬರೀಷ್ ಹೇಳಿದರು.

■ ರಘು

